2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

S.C. No.186/2021

ದೋ.ಸಾ. 15
ಪ್ರಾ.ಸಾ. 2
ಪ್ರ.ವ.ಬೊ.ದಿನಾಂಕ. 01-02-2023

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಹರಿಥಾ |
| ತಂದೆ / ಗಂಡನ ಹೆಸರು | - | ಆಶಿಕ್ |
| ವಯಸ್ಸು | - | 23 |
| ಉದ್ಯೋಗ | - | ಗೃಹಿಣಿ |
| ವಾಸ ಸ್ಥಳ | - | ತಮಿಳುನಾಡು |

ಆರೋಪಿಯನ್ನು ವಿಸಿ ಮೂಲಕ ಹಾಜರುಪಡಿಸಲಾಗಿರುತ್ತದೆ.
ಸಾಕ್ಷಿಯ ವಿಚಾರಣೆಯನ್ನು ಇನ್ ಕಾಮರಾದ ಮೂಲಕ ತೆಗೆದುಕೊಳ್ಳಲಾಯಿತು.
ಮುಖ್ಯ ವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಪ್ರಾ.ಸಾ.1 ನನ್ನ ತಂದೆ. ಚಾ.ಸಾ.16 ನನ್ನ ತಾಯಿ. ನನಗೆ ಚಾ.ಸಾ.17 ರಿಂದ 19 ರವರ ಪರಿಚಯ ಇರುತ್ತದೆ. ಸಾಕ್ಷಿಯು ವಿಸಿಯಲ್ಲಿ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

ಆರೋಪಿತನು ಮೊದಲು ನನ್ನ ತಾಯಿಯ ತಮ್ಮನ ಕಾರಿನಲ್ಲಿ ಚಾಲಕರಾಗಿ ಕೆಲಸ ಮಾಡುತ್ತಿದ್ದನು. ಆ ಸಮಯದಲ್ಲಿ ಆರೋಪಿತನು ನನ್ನನ್ನು ಕಾಲೇಜಿಗೆ ಕರೆದುಕೊಂಡು ಹೋಗಿ ಬಂದು ಮಾಡುತ್ತಿದ್ದನು. ಆ ರೀತಿ ಆತ ನನ್ನನ್ನು ಕಾಲೇಜಿಗೆ ಕರೆದುಕೊಂಡು ಹೋಗಿ ಬರುವಾಗ ನನ್ನ ಜೊತೆಯಲ್ಲಿ ಚೆನ್ನಾಗಿಯೇ ಇದ್ದು, ನಂತರ ಒಂದು ದಿನ ನನ್ನನ್ನು ಪ್ರೀತಿಸುವುದಾಗಿ ಹೇಳಿರುತ್ತಾನೆ. ಆ ಸಮಯದಲ್ಲಿ ನಾನು ಆರೋಪಿತನಿಗೆ ಬೇಡ, ಮನೆಯಲ್ಲಿ ವಿಷಯ ತಿಳಿದರೆ ತೊಂದರೆಯಾಗುತ್ತದೆ ಎಂದು ಹೇಳಿರುತ್ತೇನೆ. ತದನಂತರ ಈ ವಿಷಯವು ನಮ್ಮ ಮನೆಯಲ್ಲಿ ತಿಳಿದುಬಂದಿದ್ದು, ನಂತರ ನಮ್ಮ ಪಾಲಕರು ನಮ್ಮಿಬ್ಬರಿಗೂ ಬುದ್ದಿವಾದ ಹೇಳಿ ನಂತರ ಆರೋಪಿತನನ್ನು ಕೆಲಸದಿಂದ ತೆಗೆದುಹಾಕಿರುತ್ತಾರೆ. ನಂತರ ನನ್ನನ್ನು ತಮಿಳುನಾಡಿನಲ್ಲಿ ಇರುವ ವ್ಯಕ್ತಿಗೆ ಕೊಟ್ಟು ಮದುವೆ ಮಾಡಿರುತ್ತಾರೆ. ಮದುವೆಯಾದ ನಂತರ ನಾನು ನನ್ನ ಗಂಡನ ಮನೆಯಿರುವ ತಮಿಳುನಾಡಿನ ತಿರುವಟ್ಟರ್ ಎಂಬ ಊರಿನಲ್ಲಿ ವಾಸವಾಗಿದ್ದೆ.

ನಾನು ನನ್ನ ಗಂಡನ ಮನೆಯಲ್ಲಿ ವಾಸವಿದ್ದ ಸಮಯದಲ್ಲಿ ಆರೋಪಿತನು ನನ್ನ ವಾಟ್ಸಪ್ ಮೂಲಕ, ಪೇಸ್ ಬುಕ್ ಮೂಲಕ ನನ್ನನ್ನು ಕಾಂಟ್ಯಾಕ್ಟ್ ಮಾಡಲು ಪ್ರಯತ್ನಿಸುತ್ತಿದ್ದ. ಆ ರೀತಿ ಆರೋಪಿತನು ವಾಟ್ಸಪ್ ಮತ್ತು ಪೇಸ್ ಬುಕ್ ಮೂಲಕ ನಾನು ನಿನ್ನನ್ನು ಪ್ರೀತಿಸುತ್ತಿದ್ದೇನೆ ಬಿಟ್ಟು ಇರಲು ಆಗುತ್ತಿಲ್ಲ ಎಂದು ಹೇಳುತ್ತಿದ್ದನು. ಅಲ್ಲದೇ ನನಗೆ ಗಂಡನನ್ನು ಬಿಟ್ಟು ಬರುವಂತೆಯೂ ಇಲ್ಲವಾದರೆ ಕೈಗಳನ್ನು ಕೊಯ್ದುಕೊಳ್ಳುವುದಾಗಿ ಬೆದರಿಕೆ ಹಾಕುತ್ತಿದ್ದನು. ಆ ಸಮಯದಲ್ಲಿ ನಾನು ಆರೋಪಿತನಿಗೆ ನನ್ನದು ಈಗಾಗಲೇ ಮದುವೆಯಾಗಿದೆ, ಮಗು ಇದೆ, ಸರಿಯಾಗುವುದಿಲ್ಲ, ಸುಮ್ಮನಿರು ಎಂದು ಹೇಳಿರುತ್ತೇನೆ.

ನಂತರ ಕೆಲವು ದಿನಗಳ ಕಾಲ ಆರೋಪಿತನು ನನ್ನ ಜೊತೆ ಕಾಂಟ್ಯಾಕ್ಟ್ ಇರಲಿಲ್ಲ. ನಂತರ ನಾನು 2021 ನೇ ಜೂನ್ ನಲ್ಲಿ ನನ್ನ ಮಗನ ಜೊತೆ ನನ್ನ ತಾಯಿಯ ಮನೆಗೆ ಬಂದಿದ್ದೆ. ತದನಂತರ ಆರೋಪಿತನಿಗೆ ನಾನು ದಾವಣಗೆರೆಗೆ ಬಂದಿದ್ದು, ತಿಳಿದುಬಂದಿದ್ದು, ನಂತರ ಪುನಃ ನನ್ನ ವಾಟ್ಸಪ್ ಮತ್ತು ಪೇಸ್ ಬುಕ್ ಗೆ ಕಾಂಟ್ಯಾಕ್ಟ್

ಆಗಿರುತ್ತಾನೆ. ಆ ರೀತಿ ಆದವನು ಒಂದೆರಡು ಬಾರಿ ನನಗೆ ಆತನ ಕೈಯನ್ನು ಕೊಯ್ದು ಕೊಳ್ಳುತ್ತಿರುವ ರೀತಿಯಲ್ಲಿ ಇರುವ ಪೋಟೋಗಳನ್ನು ಕಳುಹಿಸಿಕೊಟ್ಟಿರುತ್ತಾನೆ. ಹಾಗೂ ನೀನು ತನಗೆ ಸಿಗದಿದ್ದರೆ ತಾನು ಸಾಯುವುದಾಗಿ ತನ್ನ ಬಳಿ ಹೇಳಿಕೊಂಡಿರುತ್ತಾನೆ. ತದನಂತರ ಆರೋಪಿತನು ನನ್ನ ಬಳಿ ನಾನು ನಿನ್ನನ್ನು ಬಿಟ್ಟು ಬಿಡುತ್ತೇನೆ, ಆದರೆ ನನಗೆ 2 ಲಕ್ಷ ರೂಪಾಯಿ ಹಣ ಬೇಕು ಎಂದು ನನ್ನ ಬಳಿ ಹೇಳಿರುತ್ತಾನೆ. ನಂತರ ನಾನು ಆರೋಪಿತನು ತಿಳಿಸಿದಂತೆ ನನ್ನ ತಾಯಿಯ ಮನೆಯಲ್ಲಿ ಇದ್ದ 2 ಲಕ್ಷ ರೂಪಾಯಿ ಹಣವನ್ನು ತೆಗೆದುಕೊಂಡು ಆತನು ಮೊದಲೇ ಬರಲು ಹೇಳಿದ್ದ ನಮ್ಮ ಮನೆಯ ಹತ್ತಿರ ಇರುವ ಪಾರ್ಕಿನ ಹತ್ತಿರ ಹೋಗಿರುತ್ತೇನೆ. ಆ ರೀತಿಯಾಗಿ ನಾನು ದಿಃ 16-07-2021 ರಂದು ಪಾರ್ಕಿಗೆ ಹೋಗಿರುತ್ತೇನೆ. ನಾನು ಹಣವನ್ನು ಕೊಡಲು ಹೋದಾಗ ಆರೋಪಿತನು ಬಲತ್ಕಾರವಾಗಿ ನನ್ನನ್ನು ಆತನು ತಂದಿದ್ದ ಕಾರಿನಲ್ಲಿ ಕೂರಿಸಿಕೊಂಡಿರುತ್ತಾನೆ. ನಂತರ ಆರೋಪಿತನು ನನ್ನನ್ನು ರಾಣೆಬೆನ್ನೂರಿನವರೆಗೆ ಕಾರಿನಲ್ಲಿ ಕರೆದುಕೊಂಡು ಹೋಗಿರುತ್ತಾನೆ. ಕಾರಿನಲ್ಲಿ ಹೋಗುತ್ತಿರುವಾಗ ಆರೋಪಿತನು ನನ್ನ ಬಳಿ ನಿನಗೆ ಸಂಬಂಧಿಸಿದ ಪೋಟೋಗಳು ಇದ್ದು, ಅದನ್ನು ನಿನ್ನ ಗಂಡನಿಗೆ ಕಳುಹಿಸಿಕೊಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾನೆ.

ನಂತರ ಆರೋಪಿತನು ನನ್ನನ್ನು ರಾಣೆಬೆನ್ನೂರಿನಿಂದ ಒಂದು ಬಸ್ಸಿನ ಮುಖಾಂತರ ಬೆಳಗಾವಿಗೆ ಕರೆದುಕೊಂಡು ಹೋಗಿರುತ್ತಾನೆ. ನಂತರ ನಾವು ಬಸ್ಟ್ಯಾಂಡಿನಿಂದ ಶೀತಲ್ ಎಂಬ ವಸತಿಗೃಹಕ್ಕೆ ಹೋಗಿರುತ್ತೇವೆ. ಅಲ್ಲಿ ಆರೋಪಿತನು ರೂಮನ್ನು ಪಡೆದುಕೊಳ್ಳುವ ಕುರಿತಾಗಿ ಆತನ ಬಳಿ ಯಾವುದೇ ಕಾರ್ಡ್ ಇಲ್ಲದ ಕಾರಣ ಆರೋಪಿತನು ನನ್ನ ವೋಟರ್ ಐಡಿ ಕಾರ್ಡನ್ನು ಪಡೆದುಕೊಂಡು ಅಲ್ಲಿ ರೂಮನ್ನು ಪಡೆದುಕೊಂಡಿರುತ್ತಾನೆ. ಅಲ್ಲಿ ಆರೋಪಿತನು ರೂಂ. ನಂ.205 ನ್ನು ಪಡೆದುಕೊಂಡು ನಂತರ ನನ್ನ ಮೇಲೆ ಬಲವಂತದ ಅತ್ಯಾಚಾರವನ್ನು ಮಾಡಿರುತ್ತಾನೆ. ನಂತರ ಆರೋಪಿತನು ನನಗೆ ಬೆದರಿಕೆಯನ್ನು ಹಾಕಿ ನನ್ನನ್ನು ದೆಹಲಿಗೆ ಹೋಗೋಣ ಎಂದು ಹೇಳಿ ಟ್ರೈನಿನ ಮುಖಾಂತರ ದೆಹಲಿಯ ಕಡೆಗೆ ಕರೆದುಕೊಂಡು ಹೋಗಿರುತ್ತಾನೆ. ಬೆಳಗಾವಿಯಲ್ಲಿ ಟ್ರೈನಿಗೆ ಹೋಗುವ ಕುರಿತಾಗಿ ಆರೋಪಿತನು ಆನ್ ಲೈನ್ ಮುಖಾಂತರ ಟಿಕೇಟ್ ಬುಕ್ಕಿಂಗ್ ಮಾಡಿರುತ್ತಾನೆ. ನಂತರ ನಾವು ದೆಹಲಿಗೆ ಹೋಗುತ್ತಿರುವಾಗ ಕಂಡವಾ ಸ್ಟೇಶನ್ ಬಳಿ ಪೋಲೀಸರು ನಮ್ಮನ್ನು ವಶಕ್ಕೆ ಪಡೆದಿರುತ್ತಾರೆ. ನಂತರ ಆ ಸಮಯದಲ್ಲಿ ನನಗೆ ನಮ್ಮ ಪಾಲಕರು ನಾನು ಕಾಣೆಯಾಗಿರುವ ಕುರಿತು ದೂರನ್ನು ನೀಡಿರುವ ವಿಷಯ ತಿಳಿದುಬಂದಿದ್ದು, ನಂತರ ದಾವಣಗೆರೆ ಪೋಲೀಸರು ನನ್ನನ್ನು ಅಲ್ಲಿಂದ ಕರೆದುಕೊಂಡು ವಾಪಾಸು ದಾವಣಗೆರೆಗೆ ಬಂದಿರುತ್ತಾರೆ. ಆ ರೀತಿಯಾಗಿ ದಿಃ 21-07-2021 ರಂದು ನಾನು ದಾವಣಗೆರೆಗೆ ಬಂದಿರುತ್ತೇನೆ. ನಂತರ ನನ್ನನ್ನು ವಿದ್ಯಾನಗರ ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ನನ್ನ ಹೇಳಿಕೆಯನ್ನು ಹಾಗೂ ವೈದ್ಯಕೀಯ ಪರೀಕ್ಷೆ ಮಾಡಿಸಬೇಕೆಂದು ತಿಳಿಸಿರುತ್ತಾರೆ.

ನಂತರ ಮರುದಿನ ನನ್ನನ್ನು ಪೋಲೀಸರು ಸಿಜೆ ಆಸ್ಪತ್ರೆಯ ವೈದ್ಯಾಧಿಕಾರಿಗಳ ಎದುರು ಹಾಜರುಪಡಿಸಿದ್ದು, ಅಲ್ಲಿ ವೈದ್ಯಾಧಿಕಾರಿಗಳು ನನ್ನನ್ನು ಪರೀಕ್ಷಿಸಿ ನಾನು ಧರಿಸಿದ್ದ ಬಟ್ಟೆಗಳನ್ನು ಹಾಗೂ ನನ್ನ ಗುಪ್ತಾಂಗಗಳನ್ನು ಪರೀಕ್ಷಿಸಿ ನನ್ನ ವೆಜಿನಲ್ ಸ್ವ್ಯಾಬ್ ಅನ್ನು ಸಂಗ್ರಹಿಸಿರುತ್ತಾರೆ. ಸಾಕ್ಷಿಯು ಸಿಜೆ ಆಸ್ಪತ್ರೆಯಲ್ಲಿ ತನಗೆ ತಪಾಸಣೆ ಮಾಡುವ ಸಮಯದಲ್ಲಿ ವೈದ್ಯಾಧಿಕಾರಿಗಳು ಪಡೆದುಕೊಂಡ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.5 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. ಸಿಜೆ ಆಸ್ಪತ್ರೆಯಲ್ಲಿ ವಶಕ್ಕೆ ಪಡೆದಿರುವ ನನ್ನ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈ ಹಂತದಲ್ಲಿ ನ್ಯಾಯಾಲಯದ ಮುಂದೆ ಇರುವ ಬಿಳಿಯ ಬಟ್ಟೆಯಿಂದ ಸುತ್ತಲ್ಪಟ್ಟ ವಸ್ತುಗಳನ್ನು ಆರೋಪಿ ಪರ ವಕೀಲರ ಸಮ್ಮುಖದಲ್ಲಿ ಸೀಲನ್ನು ಒಡೆದು ತೋರಿಸಲಾಗಿದ್ದು, ಅವುಗಳಲ್ಲಿರುವ ಒಂದು ಚೂಡಿದಾರದ ಟಾಪನ್ನು ಮು.ಮಾ.1

ಎಂದು, ಲೆಗಿನ್ಸ್ ಅನ್ನು ಮು.ಮಾ.2 ಎಂದು, ಒಂದು ಪ್ಯಾಂಟಿಯನ್ನು ಮು.ಮಾ.3 ಎಂದು, Nail Clippings, Vaginal Swab, Vaginal Smear ಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮು.ಮಾ.4 ರಿಂದ 6 ಎಂದು ಗುರುತಿಸಲಾಯಿತು.

ತದನಂತರ ದಿಃ 10-08-2021 ರಂದು ಪೋಲೀಸರು ನನ್ನನ್ನು ನ್ಯಾಯಾಧೀಶರ ಎದುರು ಹಾಜರುಪಡಿಸಿರುತ್ತಾರೆ. ಅಲ್ಲಿ ನಾನು ನ್ಯಾಯಾಧೀಶರಿಗೆ ನಡೆದಿರುವ ಎಲ್ಲಾ ವಿಷಯಗಳನ್ನು ಹೇಳಿರುತ್ತೇನೆ. ಈ ಹಂತದಲ್ಲಿ ಸಾಕ್ಷಿಗೆ ಆರೋಪಿ ಪರ ವಕೀಲರ ಸಮ್ಮುಖದಲ್ಲಿ ಒಂದು ಕವರನ್ನು ಒಡೆದು ತೋರಿಸಿ ಅದರಲ್ಲಿ ಇದ್ದ ದಾಖಾಲಾತಿಯನ್ನು ತೋರಿಸಲಾಗಿದ್ದು, ಅದನ್ನು ನೋಡಿ ಸಾಕ್ಷಿಯು ಅದು ತಾನು ನ್ಯಾಯಾಧೀಶರ ಮುಂದೆ ಹೇಳಿದ ಹೇಳಿಕೆಯಾಗಿರುತ್ತದೆ ಎಂದು ಹೇಳಿದ್ದು, ಕಾರಣ ಅದನ್ನು ನಿ.ಪಿ.6 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು.

ನಂತರ ಪೋಲೀಸರು ನನ್ನನ್ನು ವಿಚಾರಣೆಗೆ ಕರೆದಿದ್ದು, ಆದರೆ ಆಗ ನಾನು ಪೋಲೀಸರಿಗೆ ನಾನು ಸ್ವಲ್ಪ ಮಾನಸಿಕ ಖಿನ್ನತೆಯಲ್ಲಿ ಇದ್ದೇನೆ, ನಂತರ ಸುಧಾರಿಸಿಕೊಂಡು ತನಿಖೆಗೆ ಸಹಕರಿಸುತ್ತೇನೆ ಎಂದು ಹೇಳಿದ್ದು, ಆ ಪ್ರಕಾರ ನಂತರ ದಿಃ 07-10-2021 ರಂದು ಪೋಲೀಸರಿಗೆ ತನಿಖೆಗೆ ಸಹಕರಿಸಿರುತ್ತೇನೆ.

ನಂತರ ಅದೇ ದಿನ ಪೋಲೀಸರು ನನ್ನನ್ನು ಬೆಳಗಾವಿನ ಶೀತಲ್ ಲಾಡ್ಜ್ ಬಳಿ ಕರೆದುಕೊಂಡು ಹೋಗಿದ್ದು, ಅಲ್ಲಿ ನಾನು ಪೋಲೀಸರಿಗೆ ಆರೋಪಿತನು ಪಡೆದುಕೊಂಡಿರುವ ವಸತಿ ಗೃಹವನ್ನು ಮತ್ತು ಕೊಠಡಿಯನ್ನು ತೋರಿಸಿಕೊಟ್ಟಿರುತ್ತೇನೆ. ಅಲ್ಲಿ ಪೋಲೀಸರು ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಬರೆದು ನನ್ನ ಸಹಿ ಪಡೆದಿರುತ್ತಾರೆ. ಹಾಗೂ ಸ್ಥಳದ ಪೋಟೋವನ್ನು ಕೂಡ ತೆಗೆದಿರುತ್ತಾರೆ. ಸಾಕ್ಷಿಯು ಸದರಿ ದಾಖಲಾತಿಯನ್ನು ಹಾಗೂ ಪೋಟೋವನ್ನು ಗುರುತಿಸಿರುವ ಕಾರಣ ಅದನ್ನು ನಿ.ಪಿ.7 ಮತ್ತು 8 ಎಂದು ಹಾಗೂ ನಿ.ಪಿ.7 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು.

ನಂತರ ನಾನು ಪೋಲೀಸರಿಗೆ ಪೋಲೀಸ್ ಠಾಣೆಯಲ್ಲಿ ಈ ಕುರಿತಾಗಿ ಹೇಳಿಕೆಯನ್ನು ನೀಡಿರುತ್ತೇನೆ. ನಂತರ ದಿಃ 09-10-2021 ರಂದು ನಾನು ಪೋಲೀಸರಿಗೆ ನನ್ನನ್ನು ಆರೋಪಿತನು ಕರೆದುಕೊಂಡು ಹೋಗಿರುವ ಜಾಗವನ್ನು ತೋರಿಸಿರುತ್ತೇನೆ. ಆ ಸಮಯದಲ್ಲಿ ನಾನು ಸದರಿ ಜಾಗವನ್ನು ತೋರಿಸಿದ್ದಲ್ಲದೇ, ನನ್ನ ಮೊಬೈಲನ್ನು ಕೂಡ ಪೋಲೀಸರಿಗೆ ನೀಡಿರುತ್ತೇನೆ.

(ಈ ಹಂತದಲ್ಲಿ ಮೂಲ ಪಂಚನಾಮೆಯ ಪ್ರತಿಗಳು ಲಭ್ಯವಾಗದೇ ಇರುವ ಕಾರಣ ಅಭಿಯೋಜಕರು ಮುಂದಿನ ವಿಚಾರಣೆಯ ಕುರಿತಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಗಿರುತ್ತದೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.